**<u>ದಿನಾಂಕಃ 03-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಪಿ.ಎನ್.ಎ., ಆರೋಪಿ ಪರ ವಕೀಲರಿಂದಃ</u>**

**1.** ನಾನು ಎಸ್.ಎಸ್.ಎಲ್.ಸಿ., ವರೆಗೆ ಶಿಕ್ಷಣ ಪಡೆದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ, ಇಂಗ್ಲೀಷ ಓದಲು ಬರುವುದಿಲ್ಲ. ದಿನಾಂಕಃ 11-08-2020 ರಂದು ನಾನು ದೂರನ್ನು ದಾಖಲಿಸಿರುತ್ತೇನೆ. ನನ್ನ ದೂರಿನಲ್ಲಿ ನನ್ನ ವಯಸ್ಸನ್ನು 61 ವರ್ಷ ಹಾಗೂ ಆರೋಪಿಯ ವಯಸ್ಸನ್ನು 32 ವರ್ಷ ಅಂತಾ ಬರೆಸಿರುತ್ತೇನೆ ಅಂದರೆ ಸರಿ. ಆರೋಪಿ ನನಗೆ 30 ವರ್ಷಗಳಿಂದ ಪರಿಚಯ ಅಂತಾ ನನ್ನ ದೂರಿನಲ್ಲಿ ಬರೆಸಿರುತ್ತೇನೆ. ಆರೋಪಿ ಈ ದೂರು ದಾಖಲಿಸುವ ಮೊದಲು 30 ವರ್ಷಗಳಿಂದ ನನ್ನ ಬಳಿ 4-5 ಬಾರಿ ಹಣ ಪಡೆದುಕೊಂಡಿರುತ್ತಾನೆ ಹಾಗೂ ವಾಪಸ್ಸ ನೀಡಿರುತ್ತಾನೆ. ಆ ರೀತಿ ಹಣ ಪಡೆದು ವಾಪಸ್ಸ ನೀಡಿದ ದಿನಾಂಕಗಳು ನೆನಪಿಲ್ಲ. ನಾನು ಆರೋಪಿಗೆ ಸಾಲ ನೀಡಿದ ಬಗ್ಗೆ ದಾಖಲೆ ಮಾಡಿಕೊಂಡಿಲ್ಲ ಆತನ ಮೇಲೆ ವಿಶ್ವಾಸವಿತ್ತು ಖಾತೆ ಕಿರ್ದಿ ಬರೆದಿಲ್ಲ.

**2.** ನನ್ನ ಮೂಲ ಊರು ಹಾನಗಲ್ಲ ತಾಲ್ಲೂಕ ಉಪ್ಪುಣಸಿ ಗ್ರಾಮ ಇರುತ್ತದೆ. ನಾನು 48 ವರ್ಷಗಳ ಹಿಂದೆ ಉಪ್ಪುಣಸಿ ಗ್ರಾಮ ಬಿಟ್ಟು ಹಾವೇರಿಗೆ ಬಂದಿರುತ್ತೇನೆ. ನಾನು ಹಾವೇರಿಗೆ ಬಂದಾಗಿನಿಂದ ನಾಗೇಂದ್ರನಮಟ್ಟಿಯಲ್ಲಿಯೇ ವಾಸವಿದ್ದೇನೆ. ನಾನು ಕಳೆದ 48 ವರ್ಷಗಳಲ್ಲಿ ಹೋಟೆಲ್, ಕಿರಾಣಿ ಅಂಗಡಿ ವ್ಯಾಪಾರ ಮಾಡಿರುತ್ತೇನೆ. ನನ್ನ ಹೋಟೆಲ್‌ನ ಹೆಸರು ಬಸವೇಶ್ವರ ಅಂತಾ ಇರುತ್ತದೆ. ನನ್ನ ಕಿರಾಣಿಯ ಅಂಗಡಿಯ ಹೆಸರು ಸಹ ಬಸವೇಶ್ವರ ಅಂತಾ ಇರುತ್ತದೆ. ನಾನು ಹೋಟೆಲ್ ಹಾಗೂ ಕಿರಾಣೆ ಅಂಗಡಿ ನಡೆಸುವ ಬಗ್ಗೆ ನಗರಸಭೆಯಿಂದ ಲೈಸೆನಸ ಪಡೆದುಕೊಂಡಿರುತ್ತೇನೆ. ಈಗ ನಾನು 6-7 ವರ್ಷಗಳಿಂದ ಅಂಗಡಿ ಬಿಟ್ಟಿರುತ್ತೇನೆ. ನನ್ನ ಬಳಿ 6-7 ವರ್ಷಗಳ ಹಿಂದಿನ ಲೈಸೆನ್ಸಗಳು ಇರುವುದಿಲ್ಲ. ನಾನು ಸಿಮೆಂಟ್ ವ್ಯಾಪಾರ ಮಾಡುತ್ತಿರುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಾನು ಹೋಟೆಲ್ ಹಾಗೂ ಕಿರಾಣಿ ವ್ಯಾಪಾರವನ್ನು ಬ್ಯಾಂಕಿನಿಂದ ಸಾಲ ಪಡೆದು ನಡೆಸುತ್ತಿದ್ದೆ. ನಾನು

ಕಾರ್ಡಮಮ್ ಬ್ಯಾಂಕ್, ಮಹಾಲಕ್ಷ್ಮೀ ಕೋ-ಅಫ್ ಬ್ಯಾಂಕ್, ವರದಾ ಬ್ಯಾಂಕ್, ಕರ್ಜಗಿ ಗಳಿಂದ ಸಾಲ ಪಡೆಯುತ್ತಿದ್ದೆ. ನಾನು ಅಲ್ಲಿ ಜಾಮೀನು ಸಾಲ ಅಂತಾ ರೂ. 50,000/- ರಿಂದ ರೂ. 1,00,000/- ವರೆಗೆ ಸಾಲ ಪಡೆದಿರುತ್ತೇನೆ. ಈ ರೀತಿ ಸಾಲ ಪಡೆದು ವ್ಯಾಪಾರ ಮಾಡುತ್ತಿದ್ದೆ, ಸ್ವಂತ ಆದಾಯ ಇರಲಿಲ್ಲ ಅಂದರೆ ಮಕ್ಕಳ ಆದಾಯ ಇತ್ತು ಅಂತಾ ಹೇಳುತ್ತಾರೆ. ನನ್ನ ಮಗ ಮಹಾಲಕ್ಷ್ಮೀ ಕೋ-ಆಫ್ ಬ್ಯಾಂಕ್ ಮ್ಯಾನೇಜರ ಇರುತ್ತಾನೆ. ಇನ್ನೊಬ್ಬ ಮಗ ಹಾರ್ಡವೇರ್ ಹಾಗೂ ಸಿಮೆಂಟ್ ಅಂಗಡಿ ಹಾಗೂ ಇಟ್ಟಿಗೆ ಸಹಕಾರಿ ಸಂಘ ನಡೆಸುತ್ತಿದ್ದಾನೆ. ನಾನು ಹಾಗೂ ನನ್ನ ಮಕ್ಕಳು ವ್ಯವಹಾರ ನಡೆಸುವ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡಿರುತ್ತೇವೆ. ನಾನು ಕಳೆದ 6-7 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ನಾನು ಬೇಕಾದಲ್ಲಿ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರಪಡಿಸಬಲ್ಲೆ. ದಿನಾಂಕಃ 30-07-2018 ರಂದು ಆರೋಪಿಗೆ ಕೊಟ್ಟಿದ್ದೇನೆ ಎನ್ನುವ ರೂ. 5,00,000/- ಗಳನ್ನು ತೋರಿಸಿಲ್ಲ. ಸದರಿ ವ್ಯವಹಾರವನ್ನು ಆದಾಯ ತೆರಿಗೆಯಲ್ಲಿ ತೋರಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಆರೋಪಿಗೆ ಹಣ ನೀಡದೇ ಇರುವುದರಿಂದ ಅದನ್ನು ನನ್ನ ಆದಾಯ ತೆರಿಗೆಯಲ್ಲಿ ತೋರಿಸಿಲ್ಲ ಅಂದರೆ ಸುಳ್ಳು. ನನಗೆ ನನ್ನ ಮಗನ ಸೊಸೈಟಿಯಿಂದ ಯಾವುದೇ ಆದಾಯ ಬರುವುದಿಲ್ಲ. ನನ್ನ ಮಕ್ಕಳ ಪ್ರತಿ ವರ್ಷದ ಆದಾಯವನ್ನು ಎಷ್ಟು ಘೋಷಣೆ ಮಾಡಿರುತ್ತಾರೆ ಅಂತಾ ಅವರಿಗೆ ಗೊತ್ತು. ನನ್ನ ಮಕ್ಕಳ ಆದಾಯ ತೆರಿಗೆ ಘೋಷಣೆ ಮಾಡಿದ ದಾಖಲೆಗಳನ್ನು ಹಾಜರಪಡಿಸಲು ನನಗೆ ತೊಂದರೆ ಇರುವುದಿಲ್ಲ.

**3.** ದಿನಾಂಕಃ30-07-2018 ರಂದು ಆರೋಪಿಗೆ ನೀಡಲಾದ ರೂ.5,00,000/- ಗಳನ್ನು ನಾನು ಮನೆ ಕಟ್ಟುವ ಕುರಿತು ಹಾಗೂ ಸಿಮೆಂಟ್ ಅಂಗಡಿ ಡಿ.ಡಿ. ಕಟ್ಟುವ ಕುರಿತು ಇಟ್ಟುಕೊಂಡಿದ್ದೆ, ಅದನ್ನೇ ಆರೋಪಿಗೆ ನೀಡಿರುತ್ತೇನೆ. ಸದರಿ ಹಣ ಮನೆಯಲ್ಲಿ ವ್ಯಾಪಾರದಿಂದ ಬಂದಿದ್ದು ಇತ್ತು. ಅದು ಸಿಮೆಂಟ್ ಹಾಗೂ ಇಟ್ಟಿಗೆ ವ್ಯಾಪಾರದಿಂದ ಬಂದಿತ್ತು. ಆ ರೀತಿ ನನಗೆ ರೂ. 5.00

ಲಕ್ಷ ವ್ಯಾಪಾರದಿಂದ ಬಂದ ಬಗ್ಗೆ ಲೆಕ್ಕ ಇರುತ್ತದೆ. ಸದರಿ ಲೆಕ್ಕದ ದಾಖಲೆಯನ್ನು ಹಾಜರಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಸಿಮೆಂಟ್ ಇಟ್ಟಿಗೆ ಹಾಗೂ ಮಣ್ಣಿನ ಇಟ್ಟಿಗೆಯ ವ್ಯಾಪಾರ ಮಾಡುತ್ತೇನೆ. ನನ್ನ ಇಟ್ಟಿಗೆ ವ್ಯವಹಾರದ ಹೆಸರು ಎಂಬಿಪಿ ಅಂತಾ ಇರುತ್ತದೆ. ಈಗ ನನ್ನ ಬಳಿ ಅದರ ಕುರಿತು ಕೈಗಾರಿಕಾ ಇಲಾಖೆಯ ಪರವಾನಿಗೆ ಇರುವುದಿಲ್ಲ. ಹಿಂದೆ ಈ ವ್ಯವಹಾರ ನಡೆಸುತ್ತಿದ್ದ ಬಗ್ಗೆ ಕೈಗಾರಿಕಾ ಇಲಾಖೆಯ ಪರವಾನಿಗೆಗಳು ನನ್ನ ಬಳಿ ಇರುವುದಿಲ್ಲ. ನಾನು 6-7 ವರ್ಷಗಳ ಹಿಂದೆ ಇಟ್ಟಿಗೆ ತಯಾರಿಸುವುದನ್ನು ಬಿಟ್ಟಿರುತ್ತೇನೆ. 6-7 ವರ್ಷಗಳ ಹಿಂದೆ ನಾನು ಇಟ್ಟಿಗೆ ತಯಾರಿಸುತ್ತಿದ್ದೆ ಅಂತಾ ತೋರಿಸುವ ಕುರಿತು ಈಗ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. 2018 ರಲ್ಲಿ ಡಿ.ಡಿ. ತೆಗೆಸಲು ಹಣ ತೆಗೆದು ಇಟ್ಟಿದ್ದೆ. 2018 ರಲ್ಲಿ ಸಿಮೆಂಟ್ ಅಂಗಡಿ ಇದ್ದ ಬಗ್ಗೆ ನನ್ನ ಬಳಿ ದಾಖಲೆಗಳು ಇರುತ್ತವೆ. ಅವುಗಳನ್ನು ನಾನು ಮುಂದಿನ ಮುದ್ದತ್ತಿಗೆ ಹಾಜರಪಡಿಸಬಲ್ಲೆ. ಮನೆ ಕಟ್ಟಿಸುವ ಕುರಿತು ಪರವಾನಿಗೆ ಪಡೆದ ಬಗ್ಗೆ ದಾಖಲೆಗಳು ಇರುವುದಿಲ್ಲ. ಮನೆ ಕಟ್ಟಿಸಬೇಕು ಅಂತಾ ಇಟ್ಟಿದೆ, ಆದರೆ ಮನೆ ಕಟ್ಟಿಸಿಲ್ಲ. ಸದರಿ ಮನೆಯನ್ನು ಪ್ಲಾಟ ನಂ 62 ರಲ್ಲಿ ಕಟ್ಟಿಸಬೇಕು ಅಂತಾ ಅಂದಿದ್ದೆ.

4. ಮನೆ ಇಲ್ಲದೇ ಇರುವವರಿಗೆ ಸರ್ಕಾರದವರು ಆಶ್ರಯ ಯೋಜನೆ, ಬಸವ ವಸತಿ ಯೋಜನೆ ಹಾಗೂ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆ ಕಟ್ಟಿಸಿ ಕೊಡುತ್ತಾರೆ ಅಂದರೆ ಸರಿ. ಪ್ಲಾಟ ನಂ. 62 ರಲ್ಲಿ ಸರ್ಕಾರದವರು ನನಗೆ ಮನೆ ಕಟ್ಟಿಸಿ ಕೊಟ್ಟಿರುತ್ತಾರೆ ಅಂದರೆ ಸುಳ್ಳು.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಕಾಲಾವಕಾಶ ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 03-02-2024**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ. ಹಾವೇರಿ.**

C.C. 149/2023
ಪಿಡಬ್ಲ್ಯು-1